ಮುಖ್ಯ ಕಾರಣ. ಅರಣ್ಯಗಳು ಕಿರಿದಾಗಿ ಹುಲಿಗಳ ಆವಾಸಸ್ಥಾನಗಳು ಕರಗುತ್ತಿವೆ.

## ಕರ್ನಾಟಕದಲ್ಲಿ..


ಭಾರತದಲ್ಲಿ ಅತ್ಯಂತ ಹೆಚ್ಚು ಹುಲಿಗಳು ವಾಸವಾಗಿರುವುದು ಕರ್ನಾಟಕದ ಅರಣ್ಯಗಳಲ್ಲಿ. ರಾಜ್ಯದಲ್ಲಿ ಸುಮಾರು 406 ಹುಲಿಗಳಿವೆ ಎನ್ನುವುದು ಒಂದು ಅಂದಾಜು. ಬಂಡೀಪುರ ಅಭಯಾರಣ್ಯ ಹೆಚ್ಚಿನ ಸಂಖ್ಯೆಯ ಹುಲಿಗಳಿಗೆ ಆಶ್ರಯ ನೀಡಿದೆ. ಹುಲಿಯನ್ನು ನೋಡಲು ಬಂಡೀಪುರ ಅತ್ಯಂತ ಪ್ರಶಸ್ತ ತಾಣ. ಆದರೆ ಬಂಡೀಪುರ ಅಭಯಾರಣ್ಯದ ರಕ್ಷಣೆಗೆ ಸಾಕಷ್ಟು ಕ್ರಮಗಳನ್ನು ಸರ್ಕಾರ ಕೈಗೊಳ್ಳುತ್ತಿಲ್ಲ. ಹುಲಿರಾಯನ ಬಹುದೊಡ್ಡ ಆವಾಸಸ್ಥಾನವಾಗಿರುವ ಬಂಡೀಪುರ ಅರಣ್ಯಪ್ರದೇಶದಲ್ಲಿ ಅನಾದಿ ಕಾಲದ ಆಚರಣೆಗಳು, ಜಾತ್ರೆಗಳು, ಕೊಂಡಗಳು ಹುಲಿರಾಯನ ಏಕಾಂತಕ್ಕೆ ಭಂಗ ತರುತ್ತಿರುವುದು ಸುಳ್ಳಲ್ಲ. ಇತ್ತೀಚೆಗೆ ಐನೋರ ಮಾರಿಗುಡಿಯ ಕೊಂಡದಂದು ಬಂಡೀಪುರ ಹುಲಿ ರಕ್ಷಿತಾರಣ್ಯದಲ್ಲಿ ಜನರು ಮತ್ತು ಅರಣ್ಯ ಇಲಾಖೆ ಸಿಬ್ಬಂದಿ ಮಧ್ಯೆ ನಡೆದ ಸಂಘರ್ಷ ನೋಡಿದರೆ, ಅರಣ್ಯ ಇಲಾಖೆ ಜನರಿಂದ ದೂರವಾಗುತ್ತಿದೆಯೆ ಎಂಬ ಸಂಶಯ ಉಂಟಾಗುತ್ತಿದೆ.

ಬಂಡೀಪುರದಲ್ಲಿ 'ಬಫರ್ ಕಾಡು'ಗಳ ನಾಶ ಮೊದಲ ಸಮಸ್ಯೆ. ಇದರಿಂದಾಗಿ ಹಸು, ಕುರಿಗಳು ಕಾಡೊಳಕ್ಕೆ ಪ್ರವೇಶಿಸುವುದು ಹೆಚ್ಚಾಗುತ್ತಿದೆ. ಹಾಗೆ ಬಂದ ಸಾಕುಪ್ರಾಣಿಗಳ ಮೇಲೆ ಹುಲಿಗಳು ಎರಗಿ ಕೊಲ್ಲುವುದು, ಮಾನವ–ಪ್ರಾಣಿ ಸಂಘರ್ಷಗಳ ಸಂಖ್ಯೆ ಏರಿಕೆಗೆ ಕಾರಣವಾಗಿದೆ. ಇದನ್ನು ತಡೆಯುವಲ್ಲಿ ಅರಣ್ಯ ಇಲಾಖೆಯ ಸಿಬ್ಬಂದಿ ಪರಿಣಾಮಕಾರಿಯಾಗಿ ಕೆಲಸ ಮಾಡುತ್ತಿಲ್ಲ. ಬಂಡೀಪುರದಲ್ಲಿ ಹುಲಿಗಳ ಸುರಕ್ಷೆಯ ಬಗ್ಗೆಯೇ ಇಂತಹ ಘಟನೆಗಳು ಅನುಮಾನಗಳನ್ನು ಮೂಡಿಸುತ್ತಿವೆ.

ಅಕ್ರಮ ಒತ್ತುವರಿಗಳಿಂದ ಕಾಡಿನ ಅಂಚುಗಳಲ್ಲಿ ಅರಣ್ಯನಾಶ ಹೆಚ್ಚಾಗಿ, ಊರೊಳಕ್ಕೆ ನುಗ್ಗುವ ಕಾಡುಪ್ರಾಣಿಗಳ ಸಂಖ್ಯೆಯೂ ಹೆಚ್ಚಿದೆ. ಈ ಮಧ್ಯೆ ಕಳ್ಳಬೇಟೆಗಾರರಿಗೆ ಚೀನಾದ ಮಾರುಕಟ್ಟೆ ದೊಡ್ಡ ಆಕರ್ಷಣೆಯಾಗಿದೆ.









ಚೀನಾದಲ್ಲಿ ಹುಲಿಯುಗುರು ಸಹಿತ ವಿವಿಧ ಅಂಗಾಂಗಳಿಗೆ ಬೇಡಿಕೆ ಹೆಚ್ಚುತ್ತಿರುವುದು ಕಳ್ಳಬೇಟೆಗಾರರಿಗೆ ಕುಮ್ಮಕ್ಕು ನೀಡಿದೆ. ಹುಲಿಯ ಚರ್ಮ, ಉಗುರು, ಕೂದಲು ಮುಂತಾಗಿ ಬಹುತೇಕ ಅವಯವಗಳಿಗೆ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬಹುಡಾಲರ್‌ಗಳ ಮೌಲ್ಯವಿದೆ. ಕಳ್ಳಬೇಟೆಗಾರರಿಗೆ ಈ ಅಪಾರ ಪ್ರಮಾಣದ ಲಾಭವೇ ಕುಮ್ಮಕ್ಕು ನೀಡುತ್ತಿದೆ.

ಬಂಡೀಪುರದ ರಾಷ್ಟ್ರೀಯ ಹೆದ್ದಾರಿಯಲ್ಲಿ ರಾತ್ರಿವೇಳೆ ವಾಹನಗಳ ಸಂಚಾರ ನಿಷೇಧಗೊಂಡಿದೆ. ಈ ನಿಷೇಧವನ್ನು ತೆರವುಗೊಳಿಸಲು ತೆರೆಮರೆಯ ಪ್ರಯತ್ನ ನಡೆಯುತ್ತಿದೆ. ಈ ಮಧ್ಯೆ ಕಾಡಿನ ನಡುವೆ ರೈಲು ಸಂಚಾರದ ಯೋಜನೆಯೊಂದು ಸಿದ್ಧಗೊಂಡಿದೆ. ರೈಲು ಮಾರ್ಗ ನಿರ್ಮಿಸಲು ಪರ್ಯಾಯ ಮಾರ್ಗಗಳನ್ನು ಹುಡುಕಬಹುದು. ಆದರೆ ಹುಲಿ ಮತ್ತಿತರ ವನ್ಯಜೀವಿಗಳಿಗೆ ಯಾವ ಪರಿಹಾರವಿದೆ?

ಕಾಡಂಚಿನ ಗ್ರಾಮಗಳ ಜನರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಅರಣ್ಯ ಇಲಾಖೆ ಕಾರ್ಯ ನಿರ್ವಹಿಸಬೇಕಾಗಿದೆ. ಕಳೆದ ವರ್ಷ ಓಂಕಾರ ವಲಯದಲ್ಲಿ ಕಪ್ಪು ಚಿರತೆಯೊಂದು ವಿಷ ಪ್ರಾಶನದಿಂದ ಸಾವನ್ನು ಅಪ್ಪಿರುವುದು ಮಾನವ– ಪ್ರಾಣಿಗಳ ಸಂಘರ್ಷ ಈಗಲೂ ಜ್ವಲಂತ ಸಮಸ್ಯೆ ಎನ್ನುವುದಕ್ಕೆ ಸಾಕ್ಷಿ. ಕಳೆದ ಎರಡು ವರ್ಷಗಳಿಂದ ಕಾಡಿನ ಬೆಂಕಿ ತಡೆಯುವಲ್ಲಿ ಅರಣ್ಯ ಇಲಾಖೆಯ ಅಸಹಾಯಕತೆ ಇನ್ನೊಂದು ರೀತಿಯ ಸಮಸ್ಯೆ. ಹಾಗೆಯೇ ಕಳೆದ ವರ್ಷ ಸಾವನ್ನಪ್ಪಿದ ಹುಲಿ ಪ್ರಿನ್ಸ್ ಸಾವಿನ ರಹಸ್ಯ ಇನ್ನೂ ಬಯಲಾಗಿಲ್ಲ. ಕಾಡಂಚಿನ ಹಳ್ಳಿಗಳಲ್ಲಿ ನಿರಂತರ ಸಂಪರ್ಕ ಸಭೆಗಳನ್ನು ನಡೆಸುವ ಹಾಗೂ ಅರಣ್ಯದ ಆಯಕಟ್ಟಿನ ಊರಗಡಿಗಳಲ್ಲಿ ಹುಲಿಗಳ ಚಲನ–ವಲನ ಅರಿಯಲು ಕ್ಯಾಮೆರಾ ಅಳವಡಿಸುವ ಮೂಲಕ ಮಾನವ ಪ್ರಾಣಿ ಸಂಘರ್ಷವನ್ನು ತಪ್ಪಿಸಬೇಕಿದೆ.

ಎರಡು ವರ್ಷಗಳಲ್ಲಿ ಬಂಡೀಪುರ ವಿಭಾಗದಲ್ಲಿ ಐವರು ಜನರನ್ನು ಹುಲಿಗಳು ಕೊಂದದ್ದನ್ನು ಇಲ್ಲಿ ಸ್ಮರಿಸಬಹುದು. ಮೂರು ಹುಲಿಗಳನ್ನು ಸೆರೆಹಿಡಿದು ಬನ್ನೇರುಘಟ್ಟಕ್ಕೂ ಅಟ್ಟಿದ ಉದಾಹರಣೆಗಳಿವೆ. ಮಾನವ– ಹುಲಿ ಸಂಘರ್ಷ ತಡೆಗೆ ಗಂಭಿರ ಕ್ರಮಗಳನ್ನು ಕೈಗೊಳ್ಳುವ ತುರ್ತು ಈಗ ಹಿಂದೆಂದಿಗಿಂತ ಹೆಚ್ಚಿದೆ. ಇಲ್ಲವಾದಲ್ಲಿ ಹುಲಿದಿನ ಆಚರಣೆ ಅರ್ಥ ಕಳೆದುಕೊಳ್ಳುತ್ತದೆ. ಇಷ್ಟರ ನಡುವೆಯೂ ಬಂಡೀಪುರದಲ್ಲಿ ಆಗಾಗ್ಗೆ ಕಾಣಿಸುತ್ತಿರುವ ಹುಲಿಗಳ ಬಾಣಂತನದ ದೃಶ್ಯಗಳು ಆಶಾದಾಯಕ ಬೆಳವಣಿಗೆಗಳೆನ್ನಬಹುದು.